# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಸಾರ್ವಜನಿಕ/ಸರ್ಕಾರಿ ನೌಕರರಾದ ಶ್ರೀ ಮಂಜುನಾಥ, ಕಾರ್ಯದರ್ಶಿ, ಮಣ್ಣೆ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಕರ್ತವ್ಯ ಲೋಪ/ದುರ್ವತನೆ ಎಸಗಿರುವ ಬಗ್ಗೆ- ಆದೇಶ.

**ಓದಲಾಗಿದೆ:** 1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ-1600/2016/ಎಆರ್‌ಎಲ್‌ಓ-2, ದಿನಾಂಕ: 02-05-2017.

2. ಮಾನ್ಯ ಉಪಲೋಕಾಯಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ-1600/2016/ಸನಿಕಾಸ-2, ದಿನಾಂಕ: 25-04-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ:02-05-2017 ರವರ ಪತ್ರದೊಂದಿಗೆ ಕನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ರನ್ವಯ ಮಾನ್ಯ ಉಪಲೋಕಾಯುಕ್ತರವರ ಸಲ್ಲಿಸಿರುವ ವರದಿಯಲ್ಲಿ ಶ್ರೀಮತಿ ಹೆಚ್.ಜಯಮ್ಮ, ತಿಪ್ಪಶೆಟ್ಟಿಹಳ್ಳಿ ಗ್ರಾಮ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ 1) ಶ್ರೀ ಮಂಜುನಾಥ, ಕಾರ್ಯದರ್ಶಿ, ಮಣ್ಣೆ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**ದೂರಿನ ಸಂಕ್ಷಿಪ್ತ ವಿವರಣೆ:**

ದೂರುದಾರರು ತಮ್ಮ ದೂರಿನಲ್ಲಿ ನೆಲಮಂಗಲ ತಾಲ್ಲೂಕು ಮಣ್ಣೆ ಗ್ರಾಮದ ಖಾತೆ ನಂ.73/110 ಇದು ಪಾಳು ಮನೆಯಾಗಿದ್ದು, ಪುಟ್ಟಲಕ್ಷ್ಮಮ್ಮ ಎಂಬುವವರ ಹೆಸರಿನಲ್ಲಿರುತ್ತದೆ. ಇವರು ಮರಣ ಹೊಂದಿದ್ದು, ಆದರೆ ಎದುರುದಾರರು ಕಾನೂನುಬಾಹಿರವಾಗಿ ಮನೆಗೆ ಗ್ರಾಂಟ್ ನೀಡುವ ಸಲುವಾಗಿ ಖಾತಾ ನಂಬರಿನಲ್ಲಿ ಮತ್ತು ಖಾತಾ ಪುಸ್ತಕದಲ್ಲಿ ನಮೂದಿಸದೇ ನಮೂನೆ 9 ಮತ್ತು 11ರ ನಕಲು ಮತ್ತು ಕಂದಾಯದ ರಸೀದಿ ಹಾಕಿ ಹನುಮಕ್ಕ ಗಂಡ ಸಿದ್ದಪ್ಪ ಎಂಬುವವರಿಗೆ ದಾಖಲೆ ನೀಡಿರುತ್ತಾರೆ. ಎದುರುದಾರರು ಇದೇ ರೀತಿ ಅಕ್ರಮವೆಸಗಿ ಜನರಿಂದ ಹಣ ಲೂಟಿ ಮಾಡುತ್ತಿದ್ದಾರೆ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹನುಮಕ್ಕ ಗಂಡ ಸಿದ್ದಪ್ಪ ಇವರು ದಿ:01-04-2016 ರಂದು ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು, ಈ ಅರ್ಜಿ ಪರಿಶೀಲಿಸಲಾಗಿ ಖಾತೆ ನಂ.73/110 ಪುಟ್ಟಲಕ್ಷ್ಮಮ್ಮ ಇವರ ಹೆಸರಿನಲ್ಲಿದ್ದು, ವಂಶವೃಕ್ಷದಂತೆ ಇವರಿಗೆ 5 ಜನ ಮಕ್ಕಳಿದ್ದು, ವಿಭಾಗಪತ್ರ ಮಾಡಿಕೊಂಡಿರುತ್ತಾರೆ. ಸ್ಥಳ ಪರಿಶೀಲನೆ ಮಹಜರಿನಂತೆ ಹಾಗೂ ವಿಭಾಗ ಪತ್ರದಂತೆ ಶ್ರೀಮತಿ ಹನುಮಕ್ಕ ಗಂಡ ಸಿದ್ದಪ್ಪ ಇವರಿಗೆ 2015-16ನೇ ಸಾಲಿನ ಇಂದಿರಾ ಆವಾಸ್ ವಸತಿ ಯೋಜನೆಯಡಿಯಲ್ಲಿ ಸರ್ಕಾರದಿಂದ ಮನೆ ಕಟ್ಟಿಕೊಳ್ಳಲು ಸಹಾಯಧನ ಮಂಜೂರಾಗಿದ್ದು, ಖಾತಾ ನಂ.73/110 ಈ ಸ್ವತ್ತಿನಲ್ಲಿ ಖಾತೆ ಮಾಡಲು ಒಂದು ಖಾತೆಯನ್ನು 2 ಭಾಗ ಮಾಡಲು ಅವಕಾಶವಿಲ್ಲದ ಕಾರಣ ಇವರಿಗೆ ಮನೆಕಟ್ಟಿಕೊಳ್ಳಲು ಅನುಕೂಲವಾಗಲೆಂದು ಅನುಬಂದ 9 ಮತ್ತು 11ರ ನಕಲನ್ನು ನೀಡಲಾಗಿದೆಯೇ ಹೊರತು, ಯಾವುದೇ ಕಾನೂನುಬಾಹಿರ ಖಾತೆ ದಾಖಲು ಮಾಡಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ. ಮತ್ತು ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

ದೂರುದಾರರು ಹಾಜರುಪಡಿಸಿದ ದುರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಎದುರುದಾರರು ಶ್ರೀಮತಿ ಹನುಮಕ್ಕ ಗಂಡ ಸಿದ್ದಪ್ಪ ಇವರು ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ವಂಶವೃಕ್ಷದಂತೆ ಖಾತೆ ನಂ.73/110 ಪುಟ್ಟಲಕ್ಷ್ಮಮ್ಮ ಅವರ ಹೆಸರಿನಲ್ಲಿದ್ದು, ಆದರೆ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಮನೆ ಕಟ್ಟಿಕೊಳ್ಳಲು ಹಣ ಮಂಜೂರಾಗಿರುವುದರಿಂದ ಪುಟ್ಟಲಕ್ಷ್ಮಮ್ಮನ 5 ಜನ ವಾರಸುದಾರರ ಪೈಕಿ ಶ್ರೀಮತಿ ಹನುಮಕ್ಕ ಗಂಡ ಸಿದ್ದಪ್ಪ ಇವರಿಗೆ ಅನುಕೂಲವಾಗಲೆಂದು ಅನುಬಂಧ 9 ಮತ್ತು 11ನ್ನು ನೀಡಲಾಗಿದೆ

ಎಂದು ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ. ಎದುರುದಾರರ ಈ ಕೃತ್ಯದಿಂದ ಪುಟ್ಟಲಕ್ಷ್ಮಮ್ಮನ ಇತರ 4 ಜನ ವಂಶಸ್ಥರಿಗೆ ಅನ್ಯಾಯವಾದಂತಾಗಿರುತ್ತದೆ. ಏಕೆಂದರೆ ಕಾನೂನುಪ್ರಕಾರ ಮೃತ ವ್ಯಕ್ತಿಯ ವಾರಸುದಾರರೆಲ್ಲರಿಗೂ ಪೌತಿ ಖಾತೆ ಮಾಡಬೇಕಾಗುತ್ತದೆ. ಈ ಪ್ರಕರಣದಲ್ಲಿ ಹಾಜರುಪಡಿಸಿದ ವಿಭಾಗಪತ್ರವು ನೊಂದಾಯಿಸಲ್ಪಟ್ಟಿರುವುದಿಲ್ಲ. ಆದರೂ ಸಹ ಈ ದಾಖಲೆಯ ಆಧಾರದ ಮೇಲೆ ಶ್ರೀಮತಿ ಹನುಮಕ್ಕ ಗಂಡ ಸಿದ್ದಪ್ಪ ಇವರಿಗೆ ಮಾತ್ರ ಅನುಬಂಧ 9 ಮತ್ತು 11 ನೀಡಿರುವುದು ಕಾನೂನುಬಾಹಿರವಾಗಿರುತ್ತದೆ. ಏಕೆಂದರೆ ಈ ಆಸ್ತಿಗೆ ಇನ್ನುಳಿದ ವಾರಸುದಾರರು ಸಹ ಹಕ್ಕುದಾರರಾಗಿರುವುದರಿಂದ ಅವರು ಈ ಹಕ್ಕಿನಿಂದ ವಂಚಿತರಾಗಿರುತ್ತಾರೆ. ಎದುರುದಾರರು ಹನುಮಕ್ಕನವರಿಗೆ ಅನುಕೂಲವಾಗಲೆಂದು ಅನುಬಂಧ 9 ಮತ್ತು 11ನ್ನು ನೀಡಿ ಅಧಿಕಾರ ದುರುಪಯೋಗಪಡಿಸಿಕೊಂಡು ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಆದ್ದರಿಂದ, ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೇ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಮದ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ, 1966 ರ ನಿಯಮಗಳು 3(1) (i) ಮತ್ತು (ii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿರುವುದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಮಂಜುನಾಥ, ಕಾರ್ಯದರ್ಶಿ, ಮಣ್ಣೆ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಾದ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/414/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 19-05-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಮಂಜುನಾಥ, ಕಾರ್ಯದರ್ಶಿ, ಮಣ್ಣೆ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ 14(ಎ) ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಇವರಿಗೆ ವಹಿಸಲಾಗಿದೆ.

ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 41 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)

4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ .

6) ಶ್ರೀ ಮಂಜುನಾಥ, ಕಾರ್ಯದರ್ಶಿ, ಮಣ್ಣೆ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

7) ಗಣಕ ಕೋಶ–ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.